ದಿನಾಂಕಃ 02-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ. ಎನ್. ಟಿ. ಹೆಚ್. ವಕೀಲರಿಂದ

4. ನಾನು ಮತ್ತು ಆರೋಪಿ ಸುಮಾರು ವರ್ಷಗಳಿಂದ ವ್ಯವಹಾರ ಮಾಡುತ್ತಿರುವ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ. ಅದೇ ರೀತಿ ಆರೋಪಿ ಮತ್ತು ನಾನು ಸ್ನೇಹಿತರು ಎನ್ನುವ ಬಗ್ಗೆ ಯಾವುದೇ ದಾಖಲೆ ಹಾಜರು ಪಡಿಸಿಲ್ಲ. ಆರೋಪಿ ಹಣ ಕೇಳಿದ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ. ಆರೋಪಿಯ ಮಗ ಪ್ರಕಾಶ ಮತ್ತು ಎನ್. ಟಿ. ಗಿರೀಶ್ ರವರ ನಡುವೆ ಆಗಿದ್ದ ವ್ಯವಹಾರದ ಚೆಕ್ಕನ್ನು ನಾನು ಹಾಜರು ಪಡಿಸಿ ದೂರು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಗಿರೀಶ್ ರವರು ಲೇವಾದೇವಿ ವ್ಯವಹಾರ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಗಿರೀಶ್ ರವರು ಆರೋಪಿಯ ಮಗನಿಗೆ ಕಾಂಪ್ಲೆಕ್ಸ್ ಕಟ್ಟುವ ವಿಚಾರಕ್ಕೆ 2013 ಡಿಸೆಂಬರ್ ನಲ್ಲಿ ಹದಿನೇಳುವರೆ ಲಕ್ಷ ರೂಪಾಯಿ ಸಾಲ ಕೊಟ್ಟಿದ್ದರು ಈ ವ್ಯವಹಾರದ ಬಗ್ಗೆ ನನಗೆ ಗೊತ್ತು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಆರೋಪಿಯ ಮಗ ಭದ್ರತೆಗಾಗಿ ಮೂರು ಚೆಕ್ಕು ಹಾಗೂ 3,000/- ಮತ್ತು 5,000/- ಬೆಲೆಯ ಛಾಪಾ ಕಾಗದವನ್ನು ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರುಗಳ ನಡುವೆ ದಿನಾಂಕಃ 19-09-2019 ರಂದು ಆರೋಪಿಯ ಮಗ ಹಣ ವಾಪಸ್ಸು ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಹಣ ಪಡೆದು ಸದರಿ ಗಿರೀಶ್ ರವರು ಆರೋಪಿಗೆ ಚೆಕ್ಕುಗಳನ್ನು ವಾಪಸ್ಸು ಕೊಟ್ಟಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಗಿರೀಶ್ ರವರಿಗೆ ಆರೋಪಿ ಮಗ ಹಣ ಸಂದಾಯ ಮಾಡಿರುತ್ತೇವೆ ಚೆಕ್ಕು ಮತ್ತು ಛಾಪಾ ಕಾಗದಗಳನ್ನು ವಾಪಸ್ಸು ಕೊಡುವಂತೆ ಲೀಗಲ್ ನೋಟೀಸ್ ಕೊಟ್ಟಿದ್ದರು ಈ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ.

5. ಗಿರೀಶ್ ರವರು ನನ್ನ ಮತ್ತು ಸತೀಶ್ ಎನ್ನುವರ ಮೂಲಕ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ನಡುವೆ ಯಾವುದೇ ಹಣದ ವ್ಯವಹಾರ ನಡೆದಿಲ್ಲ ನಾನು ಗಿರೀಶ್ ರವರಿಂದ ಚೆಕ್ಕು ಪಡೆದು ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದ ಎಲ್ಲಾ ವಿಚಾರಕ್ಕೆ ಹಾಗೂ ದಾವಾ 16/2020 ಕ್ಕೆ ಸಂಬಂಧಿಸಿದಂತೆ ನಾನು ಸೇರಿದಂತೆ ಎಲ್ಲಾ ಪಕ್ಷಗಾರರ ನಡುವೆ ಆದ ವ್ಯವಹಾರದ ಬಗ್ಗೆ ವಿಡಿಯೋ ಚಿತ್ರೀಕರಣ ಇದೆ ಈ ವಿಚಾರ ನನಗೂ ಗೊತ್ತು ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಕ್ರಯ ಒಪ್ಪಂದದ ದೃಢೀಕೃತ ನಕಲನ್ನು ತೋರಿಸಲಾಗಿ ಅದರಲ್ಲಿರುವ ಸಹಿ ನನ್ನದೇ ಎಂದು ಒಪ್ಪಿರುತ್ತಾರೆ. ಸದರಿ ದಾಖಲಾತಿಯ ದೃಢೀಕೃತ ನಕಲನ್ನು ನಿಡಿ.1 ಎಂದು ಗುರುತಿಸಲಾಯಿತು. ಸಹಿ ಮಾಡಿದ ದಿನಾಂಕ ಹಾಗೂ ಯಾವ ಕಾರಣಕ್ಕೆ ಮಾಡಿದೆ ನೆನಪಿಲ್ಲ. ಸದರಿ ಸಹಿ ಮಾಡುವಾಗ ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ ಈಗ ಮರೆತು ಹೋಗಿದೆ. ಸದರಿ ಸಹಿಯನ್ನು ನಾನು 2020 ರ ವರ್ಷದಲ್ಲಿ ಮಾಡಿರುತ್ತೇನೆ ಎಂದರೆ ನೆನಪಿಲ್ಲ.

6. ನಾನು ನನ್ನ ಜಮೀನುಗಳ ಮೇಲೆ ಲೋನ್ ತೆಗೆದುಕೊಂಡಿದ್ದೇನೆ ಎಂದರೆ ಸರಿ. ಸದರಿ ಜಮೀನುಗಳು ಮಳೆ ಆಶ್ರಿತ್ ಎಂದರೆ ಪಂಪ್ ಸೇಟ್ ಇವೆ. ನಾನು ವ್ಯವಸಾಯ ಮಾಡುತ್ತೇನೆ. ವ್ಯವಸಾಯದಿಂದ ವರ್ಷಕ್ಕೆ 3 – 4 ಲಕ್ಷ ಆದಾಯ ಬರುತ್ತದೆ. ಈ ಬಗ್ಗೆ ದಾಖಲಾತಿ ಕೊಡಲು ಬಿಲ್ಲುಗಳು ಇಲ್ಲ. ನಿಪಿ.7 ರಂತೆ ದಿನಾಂಕಃ 14-06-2021 ರಂದು ರೂ. 5 ಲಕ್ಷ ಜಮೆ ಮಾಡಿದ್ದು ಅದು ಹೇಗೆ ಬಂತು ಎಂದು ಹೇಳಲು ಆಗುವುದಿಲ್ಲ. ಸಾಕ್ಷಿಯು ಮಂದುವರೆದು ಚಿಕ್ಕೋನಹಳ್ಳಿ ಮಂಜುನಾಥ ರವರು ನನಗೆ ರೂ. 5 ಲಕ್ಷ ಹಣ ಕೊಡಬೇಕಾಗಿತ್ತು ಅವರು ಕೊಟ್ಟಿರುತ್ತಾರೆ ಎಂದು ಸ್ವತಃ ಹೇಳುತ್ತಾರೆ. ಅವರ ತಂದೆಯ ಹೆಸರು ಗೊತ್ತಿಲ್ಲ. ಸದರಿ ಮಂಜುನಾಥ ರವರನ್ನು ಈ ಬಗ್ಗೆ ಸಾಕ್ಷಿ ಹೇಳಿಸಲು ತೊಂದರೆ ಇಲ್ಲ.

7. ಆರೋಪಿಯು ಸುಮಾರು 74 ವರ್ಷದ ವೃದ್ಧೆಯಾಗಿದ್ದು ಆಕೆ ನನ್ನ ಜೊತೆ ಯಾವುದೇ ಹಣದ ವ್ಯವಹಾರ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಪರಿಚಯವೇ ಇಲ್ಲ ಎಂದರೆ ಸರಿಯಲ್ಲ. ವಾದಪತ್ರ ಮತ್ತು ಪ್ರಮಾಣ ಪತ್ರಗಳಲ್ಲಿ ಪರಿಚಯಸ್ಥರು ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಮತ್ತು ಅವರ ಮಗ ದಿನಾಂಕಃ 20-08-2019 ರಲ್ಲೇ ಸ್ಟಾಪ್ ಪೇಮೆಂಟ್ ಮಾಡಿಸಲು ಅರ್ಜಿ ಕೊಟ್ಟಿದ್ದರಿಂದ ನಂತರ ಅವರು ಚೆಕ್ ವಿತರಿಸಿಲ್ಲ, ಯಾವುದೇ ವ್ಯವಹಾರ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಹಣ ಕೊಡಬೇಕಾಗಿಲ್ಲ, ಈ ದೂರು ಸಲ್ಲಿಸಿ ಅವರಿಗೆ ಕಿರುಕುಳ ಕೊಟ್ಟಿರುವುದರಿಂದ ನಾನೇ ಅವರಿಗೆ ಪರಿಹಾರ ಕೊಡಬೆಕಾಗುತ್ತದೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು )

ಓದಿ ಹೇಳಿ ಕೇಳಿ ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ನಾಗಮಂಗಲ.

ಸಾಕ್ಷಿದಾರರ ಸಹಿಃ